**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಕಸಂವಿ/ಜ್ಯೋತಿಷ್ಯ/01/ಆಡಳಿತ–2020–21** **ದಿನಾಂಕ: 29.07.2021**

## ನೆನಪೋಲೆ

2020–21ನೇ ಸಾಲಿನ ಶೈಕ್ಷಣಿಕ ಅವಧಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಬಿ.ಎ. ಎಂ.ಎ. ಸರ್ಟಿಫಿಕೇಟ್ ಡಿಪ್ಲೋಮಾ ಕೋರ್ಸ್‌ಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆವೇದನಾ ಪತ್ರವನ್ನು ಆಹ್ವಾನಿಸಲಾಗಿತ್ತು. ಜ್ಯೋತಿಷ್ಯ ಸಂಸ್ಥೆಗಳ ಮನವಿಯನ್ನು ಅಂಗೀಕರಿಸಿ (ಕಸಂವಿ/ಜ್ಯೋತಿಷ್ಯ/01/ಆಡಳಿತ–2019–20 ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ:30. ದಿನಾಂಕ: 23.09.2019) ಕೋರ್ಸಶುಲ್ಕವನ್ನು ಪರೀಕ್ಷಾ ಶುಲ್ಕವನ್ನು ಪಾವತಿಸುವ ಸಮಯದಲ್ಲಿ ಸಲ್ಲಿಸಲು ಅನುಮತಿಯನ್ನು ನೀಡಲಾಗಿತ್ತು. ಈ ಕೆಳಕಂಡ ಸೂಚನೆಗಳಿಗೆ ಅನುಸಾರವಾಗಿ ಅಧ್ಯಯನ ಸಂಸ್ಥೆಗಳು ಕೋರ್ಸಶುಲ್ಕದ ಡಿ.ಡಿ., ಪ್ರವೇಶದಾಖಲಾತಿಯ(N.R)ಹಾರ್ಡ ಕಾಪಿ & ಸಾಪ್ಟಕಾಪಿ (Hard copy & soft copy), ಅರ್ಜಿ(covering letter) ಸಹಿತ ಮಾಹಿತಿಯನ್ನು ನಿರ್ದೇಶಕರು, ಸಂಶೋಧನೆ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗ ಕ.ಸಂ.ವಿ. ಗೆ ನೀಡಬೇಕು. (ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕ ಮತ್ತು ಪರೀಕ್ಷಾಂಗವು ಕೇಳಿದ ಮಾಹಿತಿಯನ್ನು ಪರೀಕ್ಷಾಂಗಕ್ಕೆ ಸಲ್ಲಿಸುವುದು)

| ಕ್ರ.ಸಂ | ಕೋರ್ಸಗಳ ವಿವರ | ಕೋರ್ಸ ಶುಲ್ಕ | ಅರ್ಹತೆ |
|---|---|---|---|
| 1 | ಸರ್ಟಿಫಿಕೇಟ್ ಜ್ಯೋತಿಷ್ಯ/ವಾಸ್ತು/ಹಸ್ತಸಾಮುದ್ರಿಕಾ | 1500/–(ಪರೀಕ್ಷಾಶುಲ್ಕ ಪ್ರತ್ಯೇಕ) | ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ |
| 2 | ಡಿಪ್ಲೋಮಾ ಜ್ಯೋತಿಷ್ಯ/ವಾಸ್ತು | 2000/–(ಪರೀಕ್ಷಾಶುಲ್ಕ ಪ್ರತ್ಯೇಕ) | ಸರ್ಟಿಫಿಕೇಟ್ ಜ್ಯೋತಿಷ್ಯ/ವಾಸ್ತು |
| 3 | ಅಡ್ವಾನ್ಸಡಿಪ್ಲೋಮಾ ಜ್ಯೋತಿಷ್ಯ | 2500/–(ಪರೀಕ್ಷಾಶುಲ್ಕ ಪ್ರತ್ಯೇಕ) | ಡಿಪ್ಲೋಮಾ ಜ್ಯೋತಿಷ್ಯ |

- ಸರ್ಕಾರದ ನಿಯಮಾನುಸಾರ ಎಸ್.ಸಿ./ ಎಸ್.ಟಿ./ ಪ್ರವರ್ಗ–1 ಜಾತಿಯ ವಿದ್ಯಾರ್ಥಿಗಳಿಗೆ 50/: ಶುಲ್ಕವಿನಾಯಿತಿ ಇರುತ್ತದೆ.

***ವಿದ್ಯಾರ್ಥಿಗಳು ಜ್ಯೋತಿಷ್ಯ ಅಧ್ಯಯನ ಕೇಂದ್ರಗಳಿಗೆ ಕೋರ್ಸಶುಲ್ಕವನ್ನು ಸಲ್ಲಿಸಲು ಕೊನೆಯ ದಿನಾಂಕ:.15.08.2021***

***ಜ್ಯೋತಿಷ್ಯ ಅಧ್ಯಯನ ಕೇಂದ್ರಗಳು ವಿಶ್ವವಿದ್ಯಾಲಯಕ್ಕೆ ಕೋರ್ಸಶುಲ್ಕವನ್ನು ಸಲ್ಲಿಸಲು ಕೊನೆಯ ದಿನಾಂಕ:18.08.2021.***

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **'ಕುಲಸಚಿವರು, ಅಥವಾ ನಿರ್ದೇಶಕರು,** ಸಂಶೋಧನೆ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18 ಇವರ ಕಛೇರಿಯನ್ನು **(ದೂ: 080–26705387/26701303)** ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.ksu.ac.in** ನಲ್ಲಿ ವಿವರಗಳನ್ನು ಪಡೆಯಬಹುದು.

**Sd/-**
**ಕುಲಸಚಿವರು**

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಅಧ್ಯಯನ ಕೇಂದ್ರಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
2. ಕೋರ್ಸ ಶುಲ್ಕದ (ಹುಂಡಿ)ಯನ್ನು(**Finance officer, Karnataka samskrit University Bangalore) ಹಣಕಾಸು ಅಧಿಕಾರಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು** (560018) ಈ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಡಿ.ಡಿ. ಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.
3. ಆಯಾ ಅಧ್ಯಯನಕೇಂದ್ರಗಳಿಗೆ ದಾಖಲಾದ ವಿದ್ಯಾರ್ಥಿಗಳ ಕೋರ್ಸಶುಲ್ಕವನ್ನು ಅಧ್ಯಯನ ಕೇಂದ್ರದವತಿಯಿಂದ ಒಂದೇ ಡಿ.ಡಿ. ಯ ಮುಖಾಂತರ ಕಳುಹಿಸಬೇಕು. ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಡಿ.ಡಿ.ಯನ್ನು ಸಲ್ಲಿಸಿದರೆ ಅದನ್ನು ಮಾನ್ಯ ಮಾಡಲಾಗುವುದಿಲ್ಲ.

P.T.O

4. ತರಗತಿವಾರು ವಿದ್ಯಾರ್ಥಿಗಳ ಮತ್ತು ಕೋರ್ಸ್ ಶುಲ್ಕದ ವಿವರಗಳನ್ನು ಅರ್ಜಿಯಲ್ಲಿ(covering letter) ಸ್ಪಷ್ಟವಾಗಿ ನಮೂದಿಸತಕ್ಕದ್ದು.
5. ಶುಲ್ಕವಿನಾಯಿತಿ ಪಡೆಯುವ ಎಸ್.ಸಿ./ ಎಸ್.ಟಿ./ ಪ್ರವರ್ಗ-1 ವಿದ್ಯಾರ್ಥಿಗಳು ಕಡ್ಡಾಯವಾಗಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಇಲ್ಲವಾದಲ್ಲಿ ಶುಲ್ಕವಿನಾಯಿತಿಯನ್ನು ನೀಡಲಾಗುವುದಿಲ್ಲ.
6. N. R. soft copy ಯನ್ನು ksudiploma@gmail.com ಗೆ ಕಳುಹಿಸಿ ಕೊಡಬೇಕು.
7. ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ N. R. Hard copy ಯ ಮೇಲೆ ಸಂಸ್ಥೆಯ ಮುಖ್ಯಸ್ಥರ ಸಹಿ ಮತ್ತು ಮೊಹರನ್ನು ಕಡ್ಡಾಯವಾಗಿ ಹಾಕಿರಬೇಕು. ಮತ್ತು ಸಂಸ್ಥೆಯ ದೂರವಾಣಿ ಸಂಖ್ಯೆ & ಇ-ಮೇಲ್ ವಿಳಾಸವನ್ನು ನಮೂದಿಸಬೇಕು.
8. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
9. ಪ್ರವೇಶದಾಖಲಾತಿ ಪಟ್ಟಿಯಲ್ಲಿ ನಮೂದಿತವಾಗದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
10. ಪರೀಕ್ಷಾಶುಲ್ಕವನ್ನು ಪರೀಕ್ಷಾಂಗವು ನಿಗದಿಪಡಿಸಿದಂತೆ ಪ್ರತ್ಯೇಕವಾಗಿ ಭರಿಸಬೇಕಾಗುವುದು.
11. ಮಾನ್ಯತಾಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಮಾನ್ಯತೆ ನವೀಕರಣ ಮಾಡಿಕೊಳ್ಳದ ಮತ್ತು ವಾರ್ಷಿಕ ಶುಲ್ಕವನ್ನು ಪಾವತಿಸದ ಜ್ಯೋತಿಷ್ಯ ಅಧ್ಯಯನ ಕೇಂದ್ರಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

**ಪ್ರತಿಗಳು :**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-18
2. **ಮಾನ್ಯ ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-18
3. **ಮಾನ್ಯ ಕುಲಸಚಿವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-18
4. **ಹಣಕಾಸು ಅಧಿಕಾರಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-18
5. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ ಹಾಗೂ ಸೂಚನಾ ಫಲಕಗಳು
6. **ಜ್ಯೋತಿಷ್ಯ ಅಧ್ಯಯನ ಕೇಂದ್ರದ ಪ್ರಾಂಶುಪಾಲರು/ಅಧ್ಯಕ್ಷರು**
7. ಕಛೇರಿ ಪ್ರತಿ ಮತ್ತು ರಕ್ಷತಾ ಪ್ರತಿ